ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಇವರದ್ದೇ ಆದ ಒಂದು ಧ್ವಜ ಇದೆ, ಅದನ್ನು ಏನು ಮಾಡುವುದು?

ಶ್ರೀ ಸಿ. ಬೈರೇಗೌಡ.—ಅದನ್ನು ಎಲ್ಲೂ ಹಾಕಿಲ್ಲ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಬೆಳಗಾವಿ ಗಡಿ ಪ್ರದೇಶದಿಂದ ಬಂದವರು ನಾವು, ಅಲ್ಲಿ ಅಂತಹದೇನೂ ತೊಂದರೆ ಇಲ್ಲ. ಇಂತಹ ಜನ ಬಂದು ತೊಂದರೆ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಧ್ವಜದ ಪ್ರಶ್ನೆ ಮುಂಗಿಯಿತು.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ ದಯವಿಟ್ಟುನೋಡಿ, ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿದ್ದು ಎಂದೂ ಅಲ್ಲಿರುವ ಕೇಂದ್ರ ಸರ್ಕಾರದ ಅಧಿಕಾರಿಗಳು ಪತ್ರ ಬರೆಯುತ್ತಾರೆ. ಬೆಳಗಾವಿ ದಿಕ್ಕೆಟ್ಟು ಹೋಗಿದೆ, ಬೆಳಗಾವಿ ಕನ್ನಡಿಗರು ತಬ್ಬಲಿಗಳಾಗಿದ್ದಾರೆ. ಸರಕಾರ ಬೆಳಗಾವಿಯನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಿದ್ದು ಎಂದು ಕಾಗದ ಪತ್ರಗಳನ್ನು ಬರೆದಿದ್ದಾರೆ. ಅಲ್ಲಿಗೆ ಕನ್ನಡ ಅಧಿಕಾರಿಗಳನ್ನು ಹಾಕುತ್ತಿಲ್ಲ, ಮರಾಠಿ ಅಧಿಕಾರಿಗಳನ್ನು ಹಾಕುತ್ತೀರಿ ಅವರಿಗೆ ಮರಾಠಿ ಬಗ್ಗೆ ಬೆಂಬಲ ಇದೆ. ಎಂ. ಇ. ಎಸ್.ಗೆ ಪೂರ್ಣ ಬೆಂಬಲ ಕೊಡುತ್ತಿದ್ದಾರೆ. ಇದನ್ನು ತಮ್ಮ ಗಮನಕ್ಕೆ ತರುತ್ತೇನೆ. ತಮಗೆ ಕೈಮುಗಿದು ಕೇಳುತ್ತಿದ್ದೇನೆ. ೫ ಸಾವಿರ ಜನ ಇಲ್ಲಿಗೆ ಬಂದಿದ್ದಾರೆ. ಸತ್ಯಾಗ್ರಹ ಮಾಡುತ್ತಿದ್ದಾರೆ. ಬೆಳಗಾವಿ ನಗರದ ಹಿತದೃಷ್ಟಿಯಿಂದ ಅಲ್ಲಿನ ನಗರಸಭೆ ಚುನಾವಣೆಗಳನ್ನು ಮುಂದೂಡಿ...

ಅಧ್ಯಕ್ಷರು.—ಅವರು ಹೇಳುತ್ತಿರುವುದು ಯಾವುದೂ ಕಡತಕ್ಕೆ ಹೋಗಬೇಕಾದುದು ಇಲ್ಲ.

(ಗೊಂದಲ)

ಅಧ್ಯಕ್ಷರು.—ನಾನು ಎಲ್ಲ ಸದಸ್ಯರುಗಳಿಗೂ ಕೂಡ ಸಮಾನ ಅವಕಾಶವನ್ನು ಕೊಡುತ್ತೇನೆ ಎಂದು ನನ್ನನ್ನು ಚುನಾವಣೆ ಮಾಡಿದ ದಿವಸ ಈ ಸಭೆಗೆ ಭರವಸೆ ಕೊಟ್ಟಿದ್ದೇನೆ. ಒಬ್ಬ ಸದಸ್ಯರು ಇಡೀ ಸದನವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳಬಾರದು...

ಶ್ರೀ ವಾಟಾಳ್ ನಾಗರಾಜ್.—ನಮಗೆ ಆ ಭಾವನೆ ಇಲ್ಲ. ತಮಗೆ ಗೌರವ ಕೊಡುತ್ತಿದ್ದೇನೆ. ನಾನು ಎಂದೆಂದೂ ತಮಗೆ ಗೌರವ ಕೊಟ್ಟು ಮಾತನಾಡಿದ್ದೇನೆ.

ಅಧ್ಯಕ್ಷರು.—ಧ್ವಜದ ವಿಚಾರದ ಬಗ್ಗೆ ಹೇಳಲು ನಿಮಗೆ ಸಾಕಷ್ಟು ಅವಕಾಶ ಕೊಟ್ಟಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ನಾನು ಏನು ಹೇಳುತ್ತೇನೆ ಎಂದರೆ ಮಾನ್ಯ ಸಚಿವರು.....

MR. SPEAKER.—Nothing will go on record. ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಮಂತ್ರಿಗಳು ಮಸೂದೆಯನ್ನು ಮಂಡಿಸಬಹುದು.

(ಗೊಂದಲ)

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ಸರಕಾರದ ನಿಲುವನ್ನು ವಿರೋಧಿಸಿ ಸಭಾ ತ್ಯಾಗ ಮಾಡಿದರು).

(ಗೊಂದಲ)

ಶ್ರೀ ಸಿ. ಬೈರೇಗೌಡ.—ತಮ್ಮ ಗಮನಕ್ಕೆ ತರುವ ವಿಷಯ ಏನೆಂದರೆ, ನಿನ್ನೆ ದಿವಸ ಮಾನ್ಯ ವಿದ್ಯುತ್ ಮಂತ್ರಿಗಳು ಪವರ್ ಕಟ್ ಬಗ್ಗೆ ಸರಕಾರ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸುತ್ತದೆ ಅದನ್ನು ನನಗೆ ಕೊಡುತ್ತೇನೆ ಎಂದು ಹೇಳಿದ್ದರು.

ಅಧ್ಯಕ್ಷರು.—ಈ ವಿಚಾರವನ್ನು ತಾವು ಮೊದಲೇ ನನಗೆ ತಿಳಿಸಬೇಕಾಗಿತ್ತು.

ಶ್ರೀ ಸಿ. ಬೈರೇಗೌಡ.—ಇದನ್ನು ನಿನ್ನೆಯೇ ತಮ್ಮ ಗಮನಕ್ಕೆ ತಂದಿದ್ದೇನೆ. ಇದು ಇಲ್ಲಿಯವರೆಗೆ ಬಂದಿಲ್ಲ. ಇನ್ನು ಬಜೆಟ್ ಮಂಡನೆ ಮಾಡುವ ಎಲ್ಲಾ ಪುಸ್ತಕಗಳನ್ನೂ ಸದಸ್ಯರಿಗೆ ಒದಗಿಸಿ ಕೊಡಬೇಕಾಗಿರುತ್ತದೆ. ಆದರೆ ಇವತ್ತು ಕೆಲವು ಪುಸ್ತಕಗಳನ್ನು ಒದಗಿಸಿಲ್ಲ. ಇದು ಯಾವುದು ಎಂದರೆ ಸರಕಾರ ಜಿಲ್ಲಾ ಪರಿಷತ್ತುಗಳ ಮೂಲಕ ರಸ್ತೆ ಮತ್ತು ನೀರಾವರಿ, ಎನ್.ಆರ್.ಇ.ಪಿ., ಮಿನಿವಾಟರ್ ಸಪ್ಲೈ ಸ್ಕೀಮ್ ವಿಚಾರಗಳ ಬಗ್ಗೆ ಆನೆಕ್ಚರ್-೧ ಎಂಬ ಪುಸ್ತಕ ಬರುತ್ತದೆ. ಅದನ್ನು ಪ್ರತಿದಿವಸ ಕೇಳುತ್ತಿದ್ದೇನೆ. ಆದರೆ ಅದನ್ನು ಇಲ್ಲಿಯವರೆಗೆ ಒದಗಿಸಿಲ್ಲ. ಅದನ್ನು ಒದಗಿಸದಿದ್ದರೆ ಈ ಸದನದ ಹಕ್ಕು ಉಲ್ಲಂಘನೆ ಆಗುತ್ತದೆ. ಅದನ್ನು ಒದಗಿಸದೇ ಇದ್ದರೆ ಹಕ್ಕು ಉಲ್ಲಂಘನೆ ಸೂಚನೆ ಕೊಡಬೇಕಾಗುತ್ತದೆ.